**ಹೆಚ್. ಎಂ. ರಮೇಶ್‌ಗೌಡ,** ಮಾಜಿ ಶಾಸಕರು
**ಅಧ್ಯಕ್ಷರು**

**ಬೆಂಗಳೂರು ಮಹಾನಗರ ಜನತಾದಳ (ಜಾತ್ಯತೀತ)**
ಜೆ.ಪಿ. ಭವನ, ನಂ. 19/1, ಪ್ಲಾಟ್‌ಫಾರಂ ರಸ್ತೆ, ಶೇಷಾದ್ರಿಪುರಂ.
ಬೆಂಗಳೂರು-560020. ದೂರವಾಣಿ : 080-23564858, 23561329

ದಿನಾಂಕ: 22–11–2023

ಮಾನ್ಯ ಪೋಲೀಸ್ ಆಯುಕ್ತರು,
ಬೆಂಗಳೂರು ನಗರ,
ಇನ್‌ಫೆಂಟ್ರಿ ರಸ್ತೆ,
ಬೆಂಗಳೂರು.

ಮಾನ್ಯರೆ,

ವಿಷಯ:– ಅನಧಿಕೃತವಾಗಿ ಸಮಾಜದ ಸಾಮರಸ್ಯವನ್ನು ಹಾಳು ಮಾಡುವ ದುರುದ್ದೇಶದಿಂದ ಜನತಾದಳ(ಜಾತ್ಯತೀತ) ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ವಿರುದ್ಧ ಸಾರ್ವಜನಿಕರಲ್ಲಿ ಕೆಟ್ಟ ಭಾವನೆ ಬರುವಂತೆ ಭಿತ್ತಿ ಪತ್ರಗಳನ್ನು ಜೆ.ಡಿ.ಎಸ್. ಕೇಂದ್ರ ಕಛೇರಿಗೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ ಹಾಗೂ ಶೇಷಾದ್ರಿಪುರಂ ಮತ್ತು ರಾಜಾಜಿನಗರ ಹಾಗೂ ಬೆಂಗಳೂರಿನ ಹಲವಾರು ಕಡೆ ಅಂಟಿಸಿರುವ ಭಿತ್ತಿ ಪತ್ರಗಳ ಕುರಿತು ದೂರು. ಇದನ್ನು ಅಂಟಿಸಿರುವ ಆರೋಪಿಗಳಾದ ಎಸ್. ಮನೋಹರ್, ಡಿ.ಎಸ್. ಕಾರ್ತಿಕ್, ಹೆಚ್.ಡಿ. ದರ್ಶನ್‌ಗೌಡ, ಅರ್ಜುನ್ ಡಿ.ಗೌಡ, ಸಂತೋಷ್ ಹಾಗೂ ಇತರರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದೂರು.

– – –

22/11
Add'l ...

ನಾನು ಜನತಾದಳ(ಜಾತ್ಯೀತ) ಪಕ್ಷದ ಬೆಂಗಳೂರು ನಗರ ಘಟಕದ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ನನ್ನ ಪಕ್ಷದ ಕರ್ತವ್ಯದ ನಿಮಿತ್ತ ಬೆಂಗಳೂರು ನಗರದಲ್ಲಿ ಪಕ್ಷದ ಕಾರ್ಯಕರ್ತರ ಸಂಘಟನೆ ಹಾಗೂ ಸಭೆ ಸಮಾರಂಭಗಳನ್ನು ಆಯೋಜಿಸುವ ಜವಾಬ್ದಾರಿ ನನ್ನ ಹಾಗೂ ಬೆಂಗಳೂರಿನ ಪದಾಧಿಕಾರಿಗಳ ಜವಾಬ್ದಾರಿ ಆಗಿರುತ್ತದೆ. ಈ ನಿಮಿತ್ತ ನಾನು ಬೆಂಗಳೂರು ನಗರದಲ್ಲಿ ಇದ್ದಾಗ ಪಕ್ಷದ ಕಛೇರಿಗೆ ಭೇಟಿ ನೀಡಿ ಪಕ್ಷದ ಹಿರಿಯರಿಂದ ಸಲಹೆ, ಸೂಚನೆಗಳನ್ನು ಪಡೆಯಲು ಜಕ್ಕರಾಯನಕೆರೆ ಅಂಗಳದಲ್ಲಿರುವ ಪಕ್ಷದ ಕೇಂದ್ರ ಕಛೇರಿಗೆ ಭೇಟಿ ನೀಡಬೇಕಾಗುತ್ತದೆ.

ದಿನಾಂಕ: 20–11–2023 ರಂದು ಎಂದಿನಂತೆ ನಾನು ಪಕ್ಷದ ಕೇಂದ್ರ ಕಛೇರಿಗೆ ಬೆಳಗಿನ ಸಮಯದಲ್ಲಿ ಭೇಟಿ ನೀಡುವ ಸಲುವಾಗಿ ನನ್ನ ಪಕ್ಷದ ಇತರೆ ಕಾರ್ಯಕರ್ತರೊಂದಿಗೆ ಕಛೇರಿಗೆ ತೆರಳುತ್ತಿರುವಾಗ ನಮ್ಮ ಕಛೇರಿಗೆ ಹೋಗುವ ಸಾರ್ವಜನಿಕ ರಸ್ತೆಯಲ್ಲಿ ಜನರು ಗುಂಪುಗೂಡಿದ್ದರು. ಸಾರ್ವಜನಿಕರ ಓಡಾಟಕ್ಕೆ ಹಾಗೂ ವಾಹನಗಳಿಗೆ ತೊಂದರೆ ಆಗುತ್ತಿತ್ತು. ನಾನು ಸಹ ಆ ಜನ ಜಂಗುಳಿಯಲ್ಲಿ ಮುಂದೆ ಹೋಗಲಾರದೆ ನನ್ನ ವಾಹನವನ್ನು ರಸ್ತೆಯಲ್ಲಿ ನಿಲ್ಲಿಸಿ ನನ್ನ ಸಹಚರನಿಗೆ ಏನು ಆಗಿದೆ ಎಂದು ತಿಳಿದುಕೊಳ್ಳುವಂತೆ ಸೂಚಿಸಿದೆ. ನನ್ನ ಸಹಚರನು ಕಾರಿನಿಂದ ಇಳಿದು ಹೋಗಿ ನೋಡಿದಾಗ ಸಾರ್ವಜನಿಕರ ರಸ್ತೆಯ ಕಾಂಪೌಂಡ್ ಮೇಲೆ ಭಿತ್ತಿ ಪತ್ರಗಳನ್ನು ಅಂಟಿಸಿದ್ದು, ಅದರಲ್ಲಿ ನಮ್ಮ ರಾಜ್ಯಾಧ್ಯಕ್ಷರ ಫೋಟೋ, ಕ್ಯಾರಿಕೇಚರ್ (ವ್ಯಂಗ್ಯಚಿತ್ರ) ಗಳನ್ನು

. . . 2

ಹೆಚ್. ಎಂ. ರಮೇಶ್‌ಗೌಡ, ಮಾಜಿ ಶಾಸಕರು
ಅಧ್ಯಕ್ಷರು

ಬೆಂಗಳೂರು ಮಹಾನಗರ ಜನತಾದಳ (ಜಾತ್ಯತೀತ)
ಜೆ.ಪಿ. ಭವನ, ನಂ. 19/1, ಪ್ಲಾಟ್‌ಫಾರಂ ರಸ್ತೆ, ಶೇಷಾದ್ರಿಪುರಂ
ಬೆಂಗಳೂರು-560020. ದೂರವಾಣಿ : 080-23564858, 23561329



ಮುದ್ರಣ ಮಾಡಿ ಗೋಡೆಗೆ ಅಂಟಿಸಿರುವುದಾಗಿ ನನಗೆ ತಿಳಿಸಿದ. ಕೂಡಲೆ ನಾನು ಸಹ ವಾಹನದಿಂದ ಇಳಿದು ಭಿತ್ತಿ ಚಿತ್ರಗಳನ್ನು ಅಂಟಿಸಿದ ಸ್ಥಳಕ್ಕೆ ಹೋಗಿ ನೋಡಲಾಗಿ ನಮ್ಮ ಪಕ್ಷದ ರಾಜ್ಯಾಧ್ಯಕ್ಷರು ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಫೋಟೋ, ವ್ಯಂಗ್ಯ ಭಾವಚಿತ್ರಗಳಿದ್ದು, ಅದರ ಕೆಳಗಡೆ ಕೆಲವು ಮಾನಿಹಾನಿಕಾರಕವಾದ ವಕ್ಕಣಿಕೆಗಳನ್ನು ಬರೆದಿರುವುದು ಕಂಡುಬಂತು. ಅಲ್ಲಿದ್ದ ಸಾರ್ವಜನಿಕರು ನನ್ನನ್ನು ಗುರುತಿಸಿ ಭಾವೋದ್ರೇಕಗೊಂಡು, ಭಿತ್ತಿ ಪತ್ರಗಳನ್ನು ಅಂಟಿಸಿದವರನ್ನು ಗುರುತಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಪ್ರತಿಭಟನೆ ಮಾಡಿದರು. ಆಗ ನಾನು ಅವರನ್ನು ಸಮಾಧಾನಪಡಿಸಿ ತಪ್ಪಿತಸ್ಥರ ವಿರುದ್ಧ ಕಾನೂನಿನ ಕ್ರಮ ಜರುಗಿಸುವಂತೆ ಪೋಲೀಸರನ್ನು ಕೋರುವುದಾಗಿ ಕೇಳಿದ ನಂತರ ಅಲ್ಲಿದ್ದ ಸಾರ್ವಜನಿಕರು ಮತ್ತು ಪಕ್ಷದ ಕಾರ್ಯಕರ್ತರು ಚದುರಿದರು.

ಇದರ ಬಗ್ಗೆ ನಾನು ಮುಂದುವರೆದು ತನಿಖೆ ಕೈಗೊಂಡು ನಮ್ಮ ಕಛೇರಿಯ ಸುತ್ತಮುತ್ತಲಿನ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸುತ್ತಿರುವ ಸಮಯದಲ್ಲಿ ಸ್ಥಳೀಯ ದೂರದರ್ಶನ ವಾಹಿನಿಯಲ್ಲಿ ನಮ್ಮ ಕಛೇರಿಯ ಮುಂಭಾಗದ ರಸ್ತೆಯಲ್ಲಿ ವಾಹನದ ನೋಂದಣಿ ಸಂಖ್ಯೆಯಿಲ್ಲದ ಒಂದು ಕಾರಿನಲ್ಲಿ ಬಂದು, ವಾಹನವನ್ನು ನಮ್ಮ ಕಛೇರಿಯ ಮುಂಭಾಗದ ರಸ್ತೆಯಲ್ಲಿ ನಿಲ್ಲಿಸಿ, 4–5 ಜನರು ಕಾರಿನಿಂದ ಇಳಿದು ಬರುತ್ತಿರುವುದು ಕಂಡುಬಂತು. ಅವರುಗಳ ಕೈಯಲ್ಲಿ ಕೆಲವು ಭಿತ್ತಿಪತ್ರಗಳನ್ನು ತೆಗೆದುಕೊಂಡು ಬರುತ್ತಿರುವುದು ದೃಶ್ಯದಲ್ಲಿ ಕಂಡು ಬರುತ್ತದೆ. ಹಾಗೆಯೇ ಮುಂದುವರೆದು ಕಾರಿನಿಂದ ಇಳಿದ ಸದರಿ 4 ಜನ ವ್ಯಕ್ತಿಗಳು ಅವರು ತಂದಿದ್ದ ಭಿತ್ತಿ ಪತ್ರಗಳನ್ನು ಗೋಡೆಗಳ ಮೇಲೆ ಅಂಟಿಸಿ ಕ್ಷಣಾರ್ಧದಲ್ಲಿ ಅಲ್ಲಿಂದ ಕಾರನ್ನು ತೆಗೆದುಕೊಂಡು ಮಾಯವಾಗಿರುವ ದೃಶ್ಯವು ಸಹ ಕಂಡು ಬರುತ್ತದೆ. ಕಾರಿನಿಂದ ಇಳಿದ 4 ಜನರಲ್ಲಿ ಒಬ್ಬ ಮಾಜಿ ಕೆಪಿಸಿಸಿ ಕಾರ್ಯದರ್ಶಿಯಾಗಿದ್ದ ಎಸ್. ಮನೋಹರ ಎಂಬವವರು ಸಹ ಇರುವುದು ಕಂಡು ಬರುತ್ತದೆ. ಉಳಿದವರು ಕಾಂಗ್ರೆಸ್ ಪಕ್ಷದ ಮತ್ತು ಮನೋಹರ ರವರ ಸಹ ಕಾರ್ಯಕರ್ತರು ಆಗಿರುತ್ತಾರೆ.

ಈ ರೀತಿ ಸಾಮಾಜಿಕ ಜಾಲಾತಾಣದಲ್ಲಿ ದೃಶ್ಯಾವಳಿಗಳು ಹರಿದಾಡಿದ ನಂತರ ಸಾರ್ವಜನಿಕರು ಮಾಜಿ ಮುಖ್ಯಮಂತ್ರಿಗಳು, ಪಕ್ಷದ ರಾಜ್ಯಾಧ್ಯಕ್ಷರಾದ ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ಅಭಿಮಾನಿಗಳು, ಪಕ್ಷದ ಕಾರ್ಯಕರ್ತರು, ನಮ್ಮ ಕೇಂದ್ರ ಕಛೇರಿಗೆ ಆಗಮಿಸಿ ತಪ್ಪಿತಸ್ಥರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಪ್ರತಿಭಟಿಸಿದರು. ಅವರೆಲ್ಲರೂ ಉದ್ರೇಕಗೊಂಡಿದ್ದು, ಸಮಾಜದ ಸುವ್ಯವಸ್ಥೆಯನ್ನು ಹಾಳು ಮಾಡುತ್ತಿರುವ ವ್ಯಕ್ತಿಗಳನ್ನು ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸುತ್ತಿದ್ದರು.

ಈ ಮೇಲ್ಕಂಡಂತೆ, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರ ಬೆಂಬಲಿಗರು ಮತ್ತು ಶ್ರೀ ಮನೋಹರ ರವರ ಸಹಚರರು ಶ್ರೀ ಹೆಚ್.ಡಿ. ಕುಮಾರಸ್ವಾಮಿಯವರ ವಿರುದ್ಧ ಅಸಂಬದ್ಧ, ಮಾನಹಾನಿಕಾರಕ, ವ್ಯಂಗ್ಯಚಿತ್ರದ ಸಮೇತ ಸಾರ್ವಜನಿಕರ ಸಾಮರಸ್ಯಕ್ಕೆ ಕುಂದು ಬರುವಂತಹ ವಾಕ್ಯಗಳನ್ನು ಮುದ್ರಿಸಿ ಭಿತ್ತಿ ಪತ್ರಗಳನ್ನು ಕಾನೂನು ಬಾಹಿರವಾಗಿ ಸಾರ್ವಜನಿಕ ರಸ್ತೆಯ ಇಕ್ಕೆಲಗಳಲ್ಲಿ ಅಂಟಿಸಿರುವುದು,

. . . 3

ಹೆಚ್. ಎಂ. ರಮೇಶ್‌ಗೌಡ, ಮಾಜಿ ಶಾಸಕರು
ಅಧ್ಯಕ್ಷರು

ಬೆಂಗಳೂರು ಮಹಾನಗರ ಜನತಾದಳ (ಜಾತ್ಯತೀತ)
ಜೆ.ಪಿ. ಭವನ, ನಂ. 19/1, ಪ್ಲಾಟ್‌ಫಾರಂ ರಸ್ತೆ, ಶೇಷಾದ್ರಿಪುರಂ
ಬೆಂಗಳೂರು-560020. ದೂರವಾಣಿ : 080-23564858, 23561329



ಸಾರ್ವಜನಿಕರನ್ನು ಹಾಗೂ ಪಕ್ಷದ ಅಸಂಖ್ಯಾತ ಕಾರ್ಯಕರ್ತರನ್ನು ಪ್ರಚೋದನೆಗೊಳಿಸಿ ಕಾನೂನು ಸುವ್ಯವಸ್ಥೆ ಹಾಳುಗೆಡಹುವ ದುರುದ್ದೇಶ ಹೊಂದಿರುತ್ತಾರೆ.

ಹೀಗಾಗಿ, ಸದರಿ ವ್ಯಕ್ತಿಗಳು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರಾಗಿದ್ದು, ಯಾರದೋ ಕುಮ್ಮಕ್ಕಿನಿಂದ ಉದ್ದೇಶಪೂರ್ವಕವಾಗಿ ಮತ್ತು ಕಾನೂನು ಬಾಹಿರವಾಗಿ ಸಾರ್ವಜನಿಕ ಸುವ್ಯವಸ್ಥೆಗೆ ಮಾರಕವಾಗುವಂತಹ ವಿಷಯಗಳನ್ನು ಮತ್ತು ವ್ಯಂಗ್ಯ ಚಿತ್ರಗಳನ್ನು ಸಾರ್ವಜನಿಕ ಗೋಡೆಗಳಿಗೆ ಅಂಟಿಸಿರುವ ಮೂಲಕ ಪ್ರಚೋದಿಸಿದ್ದು, ಸದರಿ ಪ್ರಚೋದನೆಯು ಸಮಾಜದ ವಿವಿಧ ಸಂಘಟನೆಗಳ ಮಧ್ಯೆ ಬಿರುಕು ಉಂಟಾಗಿ ಗಲಭೆ ಹಬ್ಬಿಸುವ ಹುನ್ನಾರವಾಗಿರುತ್ತದೆ. ಅದೇರೀತಿ, ಸದರಿ ಭಿತ್ತಿ ಪತ್ರಗಳನ್ನು ಮುದ್ರಿಸಿರುವ ಬರಹಗಳು ಮತ್ತು ವ್ಯಂಗ್ಯ ಚಿತ್ರಗಳ ಮೂಲಕ ಸಮಾಜದಲ್ಲಿ ವ್ಯಕ್ತಿ ವ್ಯಕ್ತಿಗಳ ಮಧ್ಯೆ ದ್ವೇಷವನ್ನು ಉಂಟು ಮಾಡಿ ಸಾರ್ವಜನಿಕರು ಹಾಗೂ ಪಕ್ಷದ ಕಾರ್ಯಕರ್ತರನ್ನು ಕಾನೂನು ಬಾಹಿರವಾಗಿ ಕ್ರಮ ಕೈಗೊಳ್ಳುವಂತೆ ಪ್ರೇರೇಪಣೆ ನೀಡುತ್ತಿದೆ. ಈ ಹಿಂದೆಯೂ ಸಹ ಸಾಮಾಜಿಕ ಜಾಲಾ ತಾಣದಲ್ಲಿ ನಿರಂತರವಾಗಿ ಕಾನೂನು ಸುವ್ಯವಸ್ಥೆಯನ್ನು ಹಾಳು ಮಾಡಿಕೊಂಡು ಬಂದಿರುತ್ತಾರೆ.

ಈ ಎಲ್ಲಾ ಕಾರಣಗಳಿಂದ ತಮ್ಮನ್ನು ಈ ಮೂಲಕ ಕೋರುವುದೇನೆಂದರೆ, ಕೂಡಲೆ ಮೇಲ್ಕಂಡ ವ್ಯಕ್ತಿಗಳ ಕಾನೂನು ಭಂಗ ಉಂಟು ಮಾಡುವಂತೆ ಮೇಲ್ನೋಟಕ್ಕೆ ಕಂಡು ಬರುವವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿಕೊಂಡು ಅನುಮಾನಿತ ಮತ್ತು ಅವರಿಗೆ ಪ್ರಚೋದನೆ ನೀಡಿದವರನ್ನು ಕೂಡಲೆ ಬಂಧಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ಕೋರುತ್ತೇನೆ.

ಇದಕ್ಕೆ ಸಂಬಂಧಪಟ್ಟಂತ ಸಿಸಿಟಿವಿ ದೃಷ್ಯಾವಳಿಗಳುಳ್ಳ ಪೆನ್‌ಡ್ರೈವ್ ಅನ್ನು ಹಾಗೂ ಸಾಮಾಜಿಕ ಜಾಲಾ ತಾಣದಲ್ಲಿ ಅವಹೇಳನಕಾರಿ ಪ್ರಚೋದನೆ ಹೋಂದಿರುವ ಪೋಸ್ಟರ್‌ಗಳನ್ನು ಇದರೊಂದಿಗೆ ಲಗತ್ತಿಸಲಾಗಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

(ಹೆಚ್.ಎಂ. ರಮೇಶ್‌ಗೌಡ)